**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರವೀಂದ್ರು ಕುರುಬಗಟ್ಟಿ | ***P.W-11*** |
| ತಂದೆಯ ಹೆಸರು | : ಮಹಾಬಲೇಶ್ವರ | ***C.W-15*** |
| ವಯಸ್ಸು | : 50 ವರ್ಷ | |
| ಉದ್ಯೋಗ | : ಡಿಎಸ್‌ಪಿ, ಕರ್ನಾಟಕ ಲೋಕಾಯುಕ್ತ, ಧಾರವಾಡ | |
| ವಾಸ | : ಧಾರವಾಡ | |

**ದಿನಾಂಕಃ 05-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಾನು ದಿನಾಂಕ 30-09-2013 ರಿಂದ ದಿನಾಂಕ 15-06-2017 ರವರಗೆ ರಾಣೆಬೆನ್ನೂರು ಶಹರದ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01-09-2015 ರಂದು ಚಾಸಾ-14 ಇವರಿಂದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ಚಾಸಾ-1 ಇವರನ್ನು ಹಾಜರುಪಡಿಸಿಕೊಂಡು ಅವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಮರುಹೇಳಿಕೆಯಲ್ಲಿ ಅವರು ಮದುವೆ ಕಾಲಕ್ಕೆ 254 ಗ್ರಾಂ ಬಂಗಾರದ ಆಭರಣಗಳು ಮತ್ತು 2 ಕೆಜಿ 574 ಗ್ರಾಂ ಬೆಳ್ಳಿ ಆಭರಣಗಳಿಗೆ ಸಂಬಂಧಿಸಿದ ರಶೀದಿ, ಮದುವೆ ಆಮಂತ್ರಣ ಪತ್ರಿಕೆ ಮತ್ತು ಬಟ್ಟೆ ಖರೀದಿಸಿದ ರಶೀದಿಗಳನ್ನು ಹಾಜರುಪಡಿಸಿದ್ದು ಇರುತ್ತದೆ. ಸಾಕ್ಷಿ ವಿವಾಹ ಆಮಂತ್ರಣ ಪತ್ರಿಕೆ, ಕಲ್ಯಾಣ ಮಂಟಪದ 2 ದೇಣಿಗೆ ರಶೀದಿ, ಶಾಮಿಯಾನ ರಶೀದಿ, ಪಾತ್ರೆ ವಗೈರೆ ಸಾಮಾನು ರಶೀದಿ, ಬಿ.ಎಸ್.ಚನ್ನಬಸಪ್ಪ ಬಟ್ಟೆ ಖರೀದಿ ರಶೀದಿ, ಮಲಬಾರ್ ಗೋಲ್ಡ, ನಲ್ಲೂರು ಪಾಂಡುರಂಗ ಜುವೆಲ್ಲರ್ಸ 3 ರಶೀದಿಗಳು, ಮಲಬಾರ್ ಗೋಲ್ಡನ 5 ರಶೀದಿಗಳು ಹಾಗೂ ಮದುವೆಯಕಾಲಕ್ಕೆ ತೆಗೆದ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-7 ರಿಂದ 25 ಎಂದು ಗುರುತಿಸಲಾಗಿದೆ.

ತಾನು ನಂತರ ಗಂಡನ ವನೆಗೆ ಹೋದಾಗ ಅಲ್ಲಿ 2 – 3 ತಿಂಗಳು ಮಾತ್ರ ಚೆನ್ನಾಗಿ ನೋಡಿಕೊಂಡು ನಂತರ ಇನ್ನೂ 5 ಲಕ್ಷ ವರದಕ್ಷಿಣೆ ತರಬೇಕೆಂದು ಪೀಡಿಸಿದ್ದು ಆ

ವಿಷಯವನ್ನು ಗಂಡನಿಗೆ ಹೇಳಿದಾಗ ಆತ ತನ್ನ ತಮ್ಮ ಮತ್ತು ತಾಯಿ ಹೇಳಿದಂತೆ ನಡೆದುಕೊಳ್ಳಬೇಕೆಂದು ಹೇಳಿದ್ದು ಅಲ್ಲದೇ ತಾನು 5 ತಿಂಗಳು ಗರ್ಭಿಣಿ ಇದ್ದಾಗ ಗರ್ಭವನ್ನು ತೆಗೆದು ಹಾಕಬೇಕೆಂದು ಒತ್ತಾಯ ಮಾಡಿದ್ದು ಇರುತ್ತದೆ ಎಂದು ಮರುಹೇಳಿಕೆ ನೀಡಿದ್ದು ಇರುತ್ತದೆ. ನಂತರ 9ನೇ ತಿಂಗಳಿಗೆ ಹೆರಿಗೆಗೆ ಹೋಗಿದ್ದು ಅಲ್ಲಿ ಮಗುವಿಗೆ ಹೆರಿಗೆಯಾಗಿ 9 ತಿಂಗಳು ಕಳೆದರೂ ಕೂಡ ನೋಡಲು ಬಂದಿರಲಿಲ್ಲ. 9 ತಿಂಗಳ ನಂತರ ಮರಳಿ ಗಂಡನ ಮನೆಗೆ ಜೀವನ ಮಾಡಲು ಬಂದಾಗ ಅಲ್ಲಿ ಮನೆ ಹೊರಗೆ ನಿಲ್ಲಿಸಿ 10 ಲಕ್ಷ ತರದೇ ಯಾಕೆ ಬಂದಿದ್ದೀಯ ಎಂದು ಹೇಳಿ ಅವಳಿಗೆ ಒಳಗೆ ಕರೆದುಕೊಳ್ಳದೇ ಇದ್ದಾಗ ಅಕ್ಕಪಕ್ಕದ ಮನೆಯವರು ಬಂದು ಬುದ್ಧಿ ಹೇಳಿದಾಗ ಮನೆಯೊಳಗೆ ಕರೆದುಕೊಂಡಿದ್ದು ಇರುತ್ತದೆ. ಆರೋಪಿ 2 ನೀನು ಇಲ್ಲಿ ಇರುವುದಾದರೆ ನಾನು ಇಲ್ಲಿರುವುದಿಲ್ಲ ಎಂದು ಅದೇ ದಿನ ಮನೆಯಿಂದ ಹೊರಗೆ ಹೋಗಿದ್ದು ಇರುತ್ತದೆ. ನಂತರ 1 ಮತ್ತು 3 ಆರೋಪಿತರು ಅವರೂ ಕೂಡ ತಾವು ಅವಳ ಜೊತೆ ಬಾಳ್ವೆ ಮಾಡುವುದಿಲ್ಲ ಎಂದು ಮನೆಯಿಂದ ಹೊರಗೆ ಹೊಗಿದ್ದು ಆಗ ಚಾಸಾ-1 ಬೇರೆಯವರ ಕಡೆಯಿಂದ ಪಾತ್ರೆ ಮತ್ತು ಗ್ಯಾಸ್ ತಂದು ತಂದೆ ಕೊಟ್ಟ ರೇಶನ್ ಮೂಲಕ ಎರಡೂವರೆ ತಿಂಗಳು ಅಲ್ಲಿ ವಾಸ ಮಾಡಿದ್ದು ಇರುತ್ತದೆ. ನಂತರ ಹಿರಿಯರನ್ನು ಕೇಳಿ ಆಮೇಲೆ ಬಂದು ತಡವಾಗಿ ದೂರು ಕೊಟ್ಟಿರುತ್ತೇನೆ ಎಂದು ತನ್ನ ಹೇಳಿಕೆಯಲ್ಲಿ ತಿಳಿಸಿರುತ್ತಾಳೆ.

ಅದೇ ದಿನ ಚಾಸಾ-10, 11 ಇವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 14-09-2015 ರಂದು ಚಾಸಾ-4 ರಿಂದ 8 ಇವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 30-09-2015 ರಂದು ಚಾಸಾ-4 ಇವರು ಮಗಳ ಮದುವೆಗಾಗಿ ಜಿಪಿಎಫ್ ಸಾಲ ಪಡೆದ ಬಗ್ಗೆ ತೋರಿಸಿ ಆ ಕುರಿತು ಮರುಹೇಳಿಕೆ ನೀಡಿದ್ದು ಇರುತ್ತದೆ. ಅದೇ ದಿನ 2ನೇ ಆರೋಪಿ ಕೆಇಬಿಯಲ್ಲಿ ನೌಕರನಿರುವುದರಿಂದ ಪತ್ರ ವ್ಯವಹಾರ ಮಾಡಿರುತ್ತೇನೆ.

ದಿನಾಂಕ 09-12-2015 ರಂದು ಆರೋಪಿತರ ಮೇಲೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಚಾಸಾ-1 ಇವರು ದಿನಾಂಕ 31-08-2015 ರಂದು ದೂರು ದಾಖಲಿಸಿರುತ್ತಾರೆ. ನಾನಾಗಲಿ ಅಥವಾ ನನ್ನ ಹಿಂದಿನ ತನಿಖಾಧಿಕಾರಿಯಾಗಲಿ ಆರೋಪಿತರನ್ನು ಕರೆಸಿ

ವಿಚಾರಣೆ ಮಾಡಿಲ್ಲ ಎಂದರೆ ಅವರು ತಲೆಮರೆಸಿಕೊಂಡಿದ್ದರು ಎಂದು ಹೇಳುತ್ತಾರೆ. ಆರೋಪಿತರಿಗೆ ನೊಟೀಸ್ ಕೊಟ್ಟಿಲ್ಲ. ಕಲಂ 498 ಎ ಭಾ.ದಂ.ಸಂ. ಅಡಿಯಲ್ಲಿ ಅಪರಾದ ದಾಖಲಾದಾಗ ಆರೋಪಿತರನ್ನು ಕರೆಸಿ ವಿಚಾರಣೆ ಮಾಡಬೇಕೆಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ ಎಂದರೆ ನಿಜ. ಸದ್ರಿ ಆರೋಪಿತರನ್ನು ಕರೆಸಲು ಪ್ರಯತ್ನ ಮಾಡಿದ್ದು ಅವರು ಮನೆಯಲ್ಲಾಗಲಿ ಕಚೇರಿಯಲ್ಲಾಗಲಿ ದೊರಕಿದ್ದು ಇಲ್ಲ. ಸದ್ರಿ ದೂರು ದಾಖಲಿಸಿದ ದಿನವೇ ಸ್ಥಳ ಮಹಜರು ಆಗಿದೆ ಎಂದರೆ ನಿಜ. ಸರ್ವೋಚ್ಚ ನ್ಯಾಯಾಲಯದ ನಿಯಮವನ್ನು ಉಲ್ಲಂಘನೆ ಮಾಡಿ ಫಿರ್ಯಾದಿಯ ಮಾತು ಕೇಳಿ ಸುಳ್ಳು ಫಿರ್ಯಾದಿ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ.

ಚಾಸಾ-1 ಕೊಟ್ಟೂರು ಗ್ರಾಮದವರು. ಆರೋಪಿ 2 ಕೆಇಬಿ ಇಲಾಖೆಯಲ್ಲಿ ಕೆಲಸ ಮಾಡುತ್ತಾನೆ. 1, 3 ನೇ ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿತರ ಮನೆತನದ ಬಗ್ಗೆ ತಿಳಿದುಕೊಳ್ಳದೇ ಮತ್ತು ಅವರ ಕರ್ತವ್ಯ ಕುರಿತು ತಿಳಿದುಕೊಳ್ಳದೇ ಸುಳ್ಳು ಫಿರ್ಯಾದಿ ದಾಖಲಿಸಿ ಸರಿಯಾದ ತನಿಖೆ ಕೈಗೊಂಡಿಲ್ಲ ಎಂದರೆ ಸರಿ ಅಲ್ಲ. ಚಾಸಾ-1 ಇವರ ತಂದೆಯ ಹೆಸರು ಎಚ್.ಎನ್.ಪ್ರಭಾಕರ. ನಿಪಿ-12 ರಲ್ಲಿ ದಾಖಲೆಗಳು ಫಿರ್ಯಾದಿಯ ತಂದೆ ಹೆಸರಿನಲ್ಲಿ ಇದ್ದು ಚಾಸಾ-1 ಮತ್ತು ಅವರ ತಂದೆಯ ಹೆಸರು ದಾಖಲಿಲ್ಲ ಎಂದರೆ ನಿಜ. ನಿಪಿ-13 ರಲ್ಲಿ ಕೂಡ ಚಾಸಾ-1 ಮತ್ತು ಅವರ ತಂದೆಯ ಹೆಸರು ದಾಖಲಿಲ್ಲ ಎಂದರೆ ನಿಜ. ನಿಪಿ-14 ರಿಂದ 16, 18 ಇದು ಬಂಗಾರ ಎಷ್ಟಾಗುತ್ತದೆ ಎಂದು ಕೊಟ್ಟ ದಾಖಲೆ ಎಂದರೆ ನಿಜ. ನಿಪಿ-19, 20 ಮಾತ್ರ ಚಾಸಾ-1 ಇವರ ತಂದೆಯ ಹೆಸರಿನಲ್ಲಿದೆ ಎಂದರೆ ನಿಜ. ಅವುಗಳಲ್ಲಿ ಬಿಲ್ಲುಗಳು ರೂ.74,030/- ಮತ್ತು ರೂ.570/- ಇದೆ ಎಂದರೆ ನಿಜ. ನಿಪಿ-21 ನಗದೀಕರಣಕ್ಕಾಗಿ ಕೊಟ್ಟ ರಶೀದಿ ಅಲ್ಲ ಎಂದರೆ ನಿಜ.

ಚಾಸಾ-1 ಇವರು ಸುಳ್ಳು ದಾಖಲೆಗಳನ್ನು ಕೊಟ್ಟರೂ ಕೂಡ ನಾನು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ಫಿರ್ಯಾದಿ ಕೊಟ್ಟ ದೂರಿಗೂ ಮತ್ತು ದಾಖಲೆಗಳಿಗೂ ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿ ಅಲ್ಲ. ನಾನು ಫಿರ್ಯಾದಿಯ ಮರುಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ಅದೇ ರೀತಿ ಚಾಸಾ-4 ರಿಂದ 8 ಇವರ ಹೇಳಿಕೆ ಪಡೆದಿಲ್ಲ ಎಂದರೆ ಸರಿ ಅಲ್ಲ. ಆರೋಪಿತನ ಕಚೇರಿಗೆ ಪತ್ರ

ವ್ಯವಹಾರ ಮಾಡಿದ ಕುರಿತು ಯಾವುದೇ ದಾಖಲೆ ಸಲ್ಲಿಸಿಲ್ಲ. ನಾನು ಫಿರ್ಯಾದಿದಾರರಿಂದ ಸುಳ್ಳು ಮಾಹಿತಿ ತೆಗೆದುಕೊಂಡು ಸರಿಯಾಗಿ ತನಿಖೆ ಮಾಡದೇ ಸುಳ್ಳು ಅಂತಿಮ ವರದಿ ದಾಖಲಿಸಿರುತ್ತೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.